ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 255

**4 ಜೂನ್ 2023 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

**ಗಾಯನ**



ವಿದುಷಿ ಸೂರ್ಯಗಾಯತ್ರಿ



ವಿದ್ವಾನ್ ಪಿ.ವಿ. ಸನಿಲ್
ವಯೊಲಿನ್



ವಿದ್ವಾನ್ ಪಿ.ವಿ. ಅನಿಲ್
ಮೃದಂಗ



ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ಸೂರ್ಯಗಾಯತ್ರಿಯವರು** ಹದಿನೇಳನೆಯ ವಯಸ್ಸಿಗೇ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ಕಲಾವಿದರು. ಕೇರಳದ ಸುಪ್ರಸಿದ್ಧ ಮೃದಂಗ ವಾದಕ ವಿದ್ವಾನ್ ಪಿ.ವಿ. ಅನಿಲ್ ಇವರ ತಂದೆ; ತಾಯಿ ಶ್ರೀಮತಿ ವಿ.ಕೆ. ದಿವ್ಯ ಕವಯತ್ರಿ. ಇವರ ಪ್ರತಿಭೆಗೆ ಪೋಷಕರು ಖ್ಯಾತ ಸಂಗೀತಗಾರ ಕುಲದೀಪ್ ಎಂ. ಪೈಯವರು. "ವಂದೇ ಗುರುಪರಂಪರಾಂ" ಶೀರ್ಷಿಕೆಯಲ್ಲಿನ ಇವರ ಹಾಡುಗಳನ್ನು ಯೂಟ್ಯೂಬ್‌ನಲ್ಲಿ 20 ಕೋಟಿ ಜನರು ಕೇಳಿ ಆನಂದಿಸಿದ್ದಾರೆ. ದೇಶವಿದೇಶಗಳಲ್ಲಿ ಮನೆಮಾತಾಗಿ ಇದುವರೆಗೂ 500 ಕ್ಕೂ ಹೆಚ್ಚು ಕಚೇರಿಗಳನ್ನು ನೀಡಿರುವರು. ಆಸ್ಟ್ರೇಲಿಯ, ಸಿಂಗಪೂರ್, ಕತಾರ್, ದಕ್ಷಿಣ ಆಫ್ರಿಕಾ, ಟ್ರಿನಿಡಾಡ್ ಮತ್ತು ಟೊಬ್ಯಾಗೊ, ಕುವೈತ್, ಬಹರೇನ್ ಮುಂತಾದ ದೇಶಗಳಲ್ಲಿ ಕರ್ನಾಟಕ ಸಂಗೀತದ ರಾಯಭಾರಿಗಳು. ಭಾರತದ ಬಹುತೇಕ ಎಲ್ಲ ರಾಜ್ಯಗಳಲ್ಲೂ ಸಂಗೀತ ಕಚೇರಿಗಳು ನಡೆದಿವೆ. ಮುಂಬಯಿಯ ಷಣ್ಮುಗಾನಂದ ಸಂಗೀತ ಸಭೆಯು ನೀಡುವ "ಎಂ.ಎಸ್. ಸುಬ್ಬಲಕ್ಷ್ಮಿ ಫೆಲೋಶಿಪ್" ಅನ್ನು ಹತ್ತನೆಯ ವಯಸ್ಸಿಗೇ ಪಡೆದುಕೊಂಡವರು. "ತ್ರಿವೆಂಡ್ರಂ ಕಲಾನಿಧಿ ಸಂಗೀತರತ್ನ" ಪ್ರಶಸ್ತಿ, ಚೆನ್ನೈನ ಭಾರತ್ ಕಲಾಚಾರ್ ಸಂಸ್ಥೆಯ "ಬಾಲಗಾನ ಕಲಾಭಾರತಿ" ಪ್ರಶಸ್ತಿ, "ಸಮಾಜಶಕ್ತಿ" ಪ್ರಶಸ್ತಿ ಮತ್ತು ಶ್ರೀ ಹರಿಹರಪುತ್ರ ಭಜನ ಸಮಾಜದ "ಭಕ್ತಿಗಾನ ಕೋಕಿಲ" ಪ್ರಶಸ್ತಿಗಳಿಗೆ ಭಾಜನರು.

**ವಿದ್ವಾನ್ ಪಿ.ವಿ. ಸನಿಲ್‌ರವರು** ಕಲಾವಿದರ ಕುಟುಂಬದಿಂದ ಬಂದವರು. ತಾತ ಕಥಕ್ಕಳಿ ಸಂಗೀತ ಪರಂಪರೆಯ ವಿದ್ವಾಂಸ ಶ್ರೀ ಕೆ.ಜಿ. ನಂಬೀಶನ್; ತಂದೆ ಕಥಕ್ಕಳಿ ಕಲಾವಿದ ವಿದ್ವಾನ್ ಬಾಲಚಂದ್ರನ್; ತಾಯಿ ಶ್ರೀಮತಿ ತಂಗಮಣಿ, ಸ್ವತಃ ಸಂಗೀತ ಕಲಾವಿದರು ಮತ್ತು ಅಧ್ಯಾಪಕರು. ಶ್ರೀ ಸನಿಲ್‌ರವರು ತಬಲಾ, ಮೃದಂಗ, ಹಾರ್ಮೋನಿಯಂಗಳನ್ನು ಕೂಡ ನುಡಿಸಬಲ್ಲವರು. 2010 ರಿಂದ ವೃತ್ತಿ ಸಂಗೀತದಲ್ಲಿ ಕ್ರಿಯಾಶೀಲರಾಗಿದ್ದಾರೆ; ವಿದುಷಿ ಸೂರ್ಯಗಾಯತ್ರಿ ಅವರ ಕಚೇರಿಗಳಿಗೆ 2016ರಿಂದಲೂ ಪಕ್ಕವಾದ್ಯ ಕಲಾವಿದರಾಗಿ ದೇಶವಿದೇಶಗಳಲ್ಲಿ ಕಾರ್ಯಕ್ರಮ ನೀಡುತ್ತಿದ್ದಾರೆ.

**ವಿದ್ವಾನ್ ಪಿ.ವಿ. ಅನಿಲ್‌ರವರು** ಕೇರಳ ಕಲಾಮಂಡಲಂನಲ್ಲಿ ವಿದ್ವಾನ್ ಕಲಾಕ್ಷೇತ್ರಂ ಮನೋಜ್ ಕುಮಾರ್ ಬಳಿ ಅಧ್ಯಯನ ಮಾಡಿ ಮೃದಂಗ ವಾದನದಲ್ಲಿ ಡಿಪ್ಲೊಮಾ ಪಡೆದರು. ಖ್ಯಾತ ಮೃದಂಗ ವಿದ್ವಾನ್ ಕಾರೈಕುಡಿ ಆರ್. ರಘುರವರಲ್ಲಿ ಉನ್ನತ ಶಿಕ್ಷಣ. ಸ್ವಲ್ಪ ಕಾಲ ವಿದ್ವಾನ್ ಮೈಸೂರು ಎನ್. ಸುಂದರೇಶನ್‌ರವರ ಬಳಿ ಶಿಷ್ಯವೃತ್ತಿ, ಪ್ರಸ್ತುತ ಚೆನ್ನೈನ ಶ್ರೀ ಆರ್. ರಮೇಶ್‌ರವರ ಬಳಿ ಹೆಚ್ಚಿನ ಶಿಕ್ಷಣ ಪಡೆಯುತ್ತಿದ್ದಾರೆ. ರಾಷ್ಟ್ರೀಯ ಯುವಜನೋತ್ಸವದಲ್ಲಿ ಮೃದಂಗವಾದನದಲ್ಲಿ ಪ್ರಥಮ ಸ್ಥಾನ ಗಳಿಸಿರುವರು. ಕ್ಯಾಲಿಕಟ್ ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಅಮೆರಿಕ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕಾ, ಮಧ್ಯಪ್ರಾಚ್ಯ ದೇಶಗಳ ಸಂಗೀತ ಕಚೇರಿಗಳಲ್ಲಿ ಭಾಗವಹಿಸಿದ್ದಾರೆ. ಇವರು ವಿದುಷಿ ಸೂರ್ಯಗಾಯತ್ರಿಯವರ ತಂದೆಯವರೂ ಹೌದು ಹಾಗೂ ಸಹ ಕಲಾವಿದರೂ ಹೌದು.

**ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್‌ರವರು** ಘಟಂ ವಿದ್ವಾಂಸರುಗಳಾದ ವಾಳಪಳ್ಳಿ ಚೆಲ್ಲಪ್ಪನ್, ಚೇರ್ತಾಲ ಜಯದೇವ್, ಲಯವಾದ್ಯ ಶಿರೋಮಣಿ ಡಾ. ಸುರೇಶ್ ವೈದ್ಯನಾಥನ್‌ರವರ ಬಳಿ ಶಿಷ್ಯ ವೃತ್ತಿ ಮಾಡಿದ್ದಾರೆ. ತ್ರಿವೆಂಡ್ರಂ ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿಯಲ್ಲಿ ಪ್ರತಿ ವರ್ಷವೂ ಸಂಗೀತ ಕಚೇರಿಗಳಿಗೆ ಆಹ್ವಾನಿತರಾಗುವ ಇವರು ಹಲವಾರು ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ. "ಮೋದಂ ಮೋಹನ ಘಟನಾದಂ" ಎಂಬ ವಿಶೇಷ ಲಯವಿನ್ಯಾಸವನ್ನು ರೂಪಿಸಿ ತುರವೂರು ತಿರುಮಲ ದೇವಸ್ವಂ, ನರಸಿಂಹಸ್ವಾಮಿ ದೇವಸ್ಥಾನ, ತಿರುಪತಿ ನೀರಾಜನಂ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರಸ್ತುತಿ ಪಡಿಸಿದ್ದಾರೆ.



# ಬೆಳದಿಂಗಳ ಸಂಗೀತ 256

## 3 ಜುಲೈ 2023



**ದ್ವಂದ್ವ ಗಾಯನ**

ವಿದುಷಿ ಲಕ್ಷ್ಮೀ ನಾಗರಾಜ್
ವಿದುಷಿ ಇಂದೂ ನಾಗರಾಜ್



**ವಯೊಲಿನ್**

ವಿದ್ವಾನ್ ಕೇಶವ ಮೋಹನ್ ಕುಮಾರ್



**ಮೃದಂಗ**

ವಿದ್ವಾನ್ ಆನೂರು ವಿನೋದ ಶ್ಯಾಂ



**ಘಟಂ**

ವಿದ್ವಾನ್ ಎಸ್. ಮಂಜುನಾಥ್

---

ಫೋನ್: 0821–2548221, 2548223 * ಇಮೇಲ್: sutturmath@jssonline.org